ತಾರತಮ್ಯ ಮಾಡುತ್ತಿದ್ದಾರೆ. ಶಿಕ್ಷಕರು ನಿವೃತ್ತಿಯಾಗುವಂತಹ ಕಾಲದಲ್ಲಿ ಗ್ರಾಚ್ಯುಟಿ ಕ್ಯಾಲ್‌ಕ್ಯುಲೇಷನ್ ಮಾಡುವಂತಹ ಸಂದರ್ಭದಲ್ಲಿ ಖಾಸಗಿ ಅನುದಾನಿತ ಶಾಲೆಗಳಲ್ಲಿ ಕೆಲಸ ಮಾಡುವಂತಹ ಟೀಚರ್‌ಗಳಿಗೆ ಮೂಲ ವೇತನವನ್ನು ಕೊಡುತ್ತಾರೆ. ಆದರೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕೆಲಸ ಮಾಡುವಂತಹ ಟೀಚರ್‌ಗಳಿಗೆ ಮೂಲ ವೇತನ ಪ್ಲಸ್ ಡಿ.ಎ.ಯನ್ನು ಕೊಡುತ್ತಿದ್ದಾರೆ. ಹೀಗಾಗಿ ಖಾಸಗಿ ಅನುದಾನಿತ ಶಾಲೆಗಳಲ್ಲಿ ಕೆಲಸ ಮಾಡುವಂತಹ ಟೀಚರ್‌ಗಳಿಗೆ ಬಹಳ ಅನ್ಯಾಯವಾಗಿದೆ. ಅವರಿಗೆ ಗ್ರಾಚ್ಯುಟಿ ಫಿಕ್ಸ್ ಮಾಡುವಾಗ ಅನ್ಯಾಯವಾಗುತ್ತದೆ. ಖಾಸಗಿ ಅನುದಾನಿತ ಶಾಲೆಗಳಲ್ಲಿ ಕೆಲಸ ಮಾಡುವ ಟೀಚರುಗಳು ಸ್ವಯಂ ನಿವೃತ್ತಿಯನ್ನು 20 ವರ್ಷಗಳಾದ ಮೇಲೆ ತೆಗೆದುಕೊಳ್ಳಬಹುದು, ಅದೇ ಸರ್ಕಾರಿ ಶಾಲೆಗಳಲ್ಲಿ 15 ವರ್ಷ ಕೆಲಸ ಮಾಡಿರುವಂಥವರು ಸ್ವಯಂ ನಿವೃತ್ತಿಯನ್ನು ತೆಗೆದುಕೊಳ್ಳಬಹುದು. ಸರ್ಕಾರಿ ಶಾಲೆಗಳಲ್ಲಿ ಕೆಲಸ ಮಾಡುವಂಥವರು 28 ವರ್ಷಗಳಿಗೆ ಸ್ವಯಂ ನಿವೃತ್ತಿಯನ್ನು ತೆಗೆದುಕೊಂಡರೆ ಅವರಿಗೆ ಐದು ಇನ್‌ಕ್ರಿಮೆಂಟ್ ಕೊಡುತ್ತಾರೆ. ಈ ಖಾಸಗಿ ಅನುದಾನಿತ ಶಾಲೆಗಳಲ್ಲಿ ಕೆಲಸ ಮಾಡುವಂತಹ ಟೀಚರುಗಳಿಗೆ ಈ ಇನ್‌ಕ್ರಿಮೆಂಟ್ ಇರುವುದಿಲ್ಲ. ಇನ್ನು ಮೆಡಿಕಲ್ ಅಲೋಯನ್ಸ್, ಸರ್ಕಾರಿ ಶಾಲೆಗಳಲ್ಲಿ ಕೆಲಸ ಮಾಡುವಂತಹ ಟೀಚರ್‌ಗಳಿಗೆ ಮಾತ್ರ ಕೊಡುತ್ತಾರೆ. ಖಾಸಗಿ ಅನುದಾನಿತ ಶಾಲೆಗಳಲ್ಲಿ ಕೆಲಸ ಮಾಡುವವರಿಗೆ ಈ ಸೌಲಭ್ಯವಿಲ್ಲ. ಈ ವಿಚಾರಗಳ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ತಾನೇ ಇದು ನನ್ನ ಕೈ ಸೇರಿದೆ. ಇದರ ಬಗ್ಗೆ ಮಾಹಿತಿ ತರಿಸಿಕೊಂಡು ಉತ್ತರ ಕೊಡುತ್ತೇನೆ.

ಏಲಂನಲ್ಲಿ ಫಸಲು ಪಡೆದವರಿಗೆ ಬ್ಯಾಂಕಿನ ಸಾಲದ ಬಡ್ಡಿಯನ್ನು ಕಟ್ಟಲು ಕಾಲಾವಕಾಶ.

ಶ್ರೀ ಕುಂಭೆ ಸುಂದರರಾವ್ (ಸುರತ್ಕಲ್) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ, ಕುಂದಾಪುರ ತಾಲ್ಲೂಕಿನಲ್ಲಿ ಗೇರು ಬೀಜದ ಮರಗಳನ್ನು, ಫಸಲನ್ನು ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಮತ್ತು ಅರಣ್ಯ ಇಲಾಖೆಯವರು ಬೇರೆ ಬೇರೆಯಾಗಿ ಪ್ರತಿ ವರ್ಷ ಏಲಂ ಮಾಡಿ ಕೊಡುವುದು ನಡೆದುಕೊಂಡು ಬಂದಿದೆ. ಇದರಲ್ಲಿ ನಿರುದ್ಯೋಗಿ ಯುವಕರು ಮತ್ತು ಮಹಿಳೆಯರು ಬ್ಯಾಂಕ್ ಮತ್ತು ಇತರ ಸಂಸ್ಥೆಗಳಿಂದ ಸಾಲ ಪಡೆದು ಏಲಂನಲ್ಲಿ ಫಸಲು ಪಡೆದು ವ್ಯಾಪಾರವನ್ನು ಮಾಡಿಕೊಂಡು ಜೀವನ ನಿರ್ವಹಣೆಯ ದಾರಿಯನ್ನು ನೋಡಿಕೊಂಡಿದ್ದಾರೆ. 1997-98ರಲ್ಲಿ ಏಲಂವಾರು ನಡೆಸಿ ಅದರ ಮೊತ್ತ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚು ಉಳಿದಿದೆ. ಆದರೆ ಈ ವರ್ಷ ಪ್ರಕೃತಿ ವೈಪರಿತ್ಯದಿಂದ ಮಾವು, ಹಲಸು, ಮತ್ತು ಗೇರುಗಳಲ್ಲಿ ಹೂ ಮೂಡಲಿಲ್ಲ, ಮತ್ತು ಫಸಲು ಬರಲಿಲ್ಲ. ಈ ರೀತಿಯಾಗಿ ಶೇ.5ರಷ್ಟು ಫಸಲು ಬಾರದೆ ಇರುವಂತಹ ಸ್ಥಿತಿಯಲ್ಲಿ ಜನರು ಕಂಗಾಲಾಗಿದ್ದಾರೆ. ಇದು ಕುಂದಾಪುರ ತಾಲ್ಲೂಕಿಗೆ ಮಾತ್ರವಲ್ಲ. ಮಲೆನಾಡಿನ ಇತರ ಭಾಗಗಳಿಗೂ ಅನ್ಯಾಯವಾಗುತ್ತಿದೆ. ಈಗ ಅವರು ಗೋಳು ಏನೆಂದರೆ ಅವರು ಹಾಕಿದಂತಹ ದುಡ್ಡು ವಾಪಸ್ಸು ಬರುವುದಿಲ್ಲ ಮತ್ತು ಫಲವೂ ಸಿಗುವುದಿಲ್ಲ. ಇವರು ಮುಂದೆ ಬ್ಯಾಂಕ್ ಲೋನ್ ಕಟ್ಟಬೇಕು ಮತ್ತು ಇಲ್ಲಿಯೂ ಬೀದರ್ ಪರಿಸ್ಥಿತಿ ಬಂದರೆ ಆಶ್ಚರ್ಯವೇನೂ ಇಲ್ಲ. ಅದಕ್ಕಾಗಿ ನಾನು ಸರ್ಕಾರದಲ್ಲಿ ವಿನಂತಿ ಮಾಡಿ ಕೊಳ್ಳುವುದೇನೆಂದರೆ

ಯಾವ ಜನರು ಫಸಲಿಗೆ ಏಲಂಗಾಗಿ ನಿಂತಿದ್ದಾರೆ, ಅವರಿಗೆ ಮುಂದಿನ ವರ್ಷ ಫಸಲನ್ನು ಪಡೆಯುವಂಥಾದ್ದಕ್ಕೆ ಗ್ಯಾರಂಟಿಯನ್ನು ಕೊಡಬೇಕು ಮತ್ತು ಅವರು ಬ್ಯಾಂಕ್‌ನಿಂದ ಏನು ಲೋನ್ ಪಡೆದಿದ್ದಾರೆ, ಅದಕ್ಕೆ ಬಡ್ಡಿಯಾಗಿ ಮುಂದಿನ ವರ್ಷ ಕಟ್ಟುವಂಥಾದ್ದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಈ ರೀತಿಯಾದರೆ ಮಾತ್ರ ಅವರು ಉಳಿಯುತ್ತಾರೆ. ಅವರ ಉಳಿವಿಗೆ ಸರ್ಕಾರ ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳೇ, ತಾವು ಇದರ ಬಗ್ಗೆ ಎಲ್ಲಾ ಡಿಟ್ಟೈಲ್‌ಗಳನ್ನು ತರಿಸಿಕೊಂಡು ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಡಿ.

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ನಾನು ಇದರ ಎಲ್ಲಾ ಮಾಹಿತಿಗಳನ್ನು ತರಿಸಿಕೊಂಡು ಸದಸ್ಯರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಕೆ.ಜಿ.ಎಫ್‌ನಲ್ಲಿ ಜಾತಿ ಪತ್ರ ನೀಡುವಲ್ಲಿ ಆಗಿರುವ ತೊಂದರೆ

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಜಾತಿ ಪತ್ರವನ್ನು ಕೊಡುವುದರಲ್ಲಿ ದೊಡ್ಡ ಸಮಸ್ಯೆ ಪ್ರಾರಂಭವಾಗಿದೆ. 90% of the people in KGF belong to scheduled caste. ಅವರಿಗೆ ಕಾಸ್ಟ್ ಸರ್ಟಿಫಿಕೇಟ್ ಕೊಡುವ ಸಮಯದಲ್ಲಿ ಹೊಸದಾಗಿ ರೂಲ್ ತೆಗೆದುಕೊಂಡು ಬಂದಿದ್ದಾರೆ. ಆ ರೂಲ್ ಏನೆಂದರೆ 1950ರ ನಿಮ್ಮ ರೆಸಿಡೆನ್ಸಿ ಸರ್ಟಿಫಿಕೇಟ್ ತೆಗೆದುಕೊಂಡು ಬನ್ನಿ ಅದು ಇಲ್ಲವೆಂದರೆ ಓಟಿಂಗ್ ಲಿಸ್ಟ್ ಕೊಡಿ ಎಂದು ಹೇಳುತ್ತಾರೆ. Election was conducted in the year 1952. ಇವರು ಕೇಳುವಂತಹ 1950ರ ರೆಸಿಡೆನ್ಸಿ ಸರ್ಟಿಫಿಕೇಟು ಅನ್ನು ಕೊಡುವುದಕ್ಕಾಗುತ್ತದೆಯೇ ? The Government should give immediate attention to this problem being faced by KGF people because this is the time for the students to seek admissions to various courses. But there is harassment from the Tahasildar from getting the caste certificate. This has been brought to the notice of the Deputy Commissioner also.

ಅಧ್ಯಕ್ಷರು : ಮಾನ್ಯ ಮಂತ್ರಿಗಳೇ ಕೆ.ಜಿ.ಎಫ್.ನಲ್ಲಿ ಇಷ್ಟೂ ಆಫ್ ಷೆಡ್ಯೂಲ್ ಕಾಸ್ಟ್ ಸರ್ಟಿಫಿಕೇಟ್ ಹೆರ್ಯಾಸ್‌ಮೆಂಟ್ ಆಗುತ್ತಿದೆ. ಅಲ್ಲಿ 1950-51ರ ಸೆನ್ಸಸ್ಸ್‌ನಲ್ಲಿ ನಿಮ್ಮ ಹೆಸರು ಇದೆಯಾ, ಓಟಿಂಗ್ ಲಿಸ್ಟ್ ಇದೆಯಾ ಎಂದೆಲ್ಲಾ ಕೇಳುತ್ತಿದ್ದಾರೆ. ಇದರಿಂದ ಸ್ಟೂಡೆಂಟ್ಸ್‌ಗೆ ಪ್ರಾಬ್ಲಂ ಆಗುತ್ತಿದೆ ಎಂದು ಸದಸ್ಯರು ಹೇಳುತ್ತಿದ್ದಾರೆ. ನೀವು ಅಲ್ಲಿನ ತಹಶೀಲ್ದಾರರಿಗೆ ಸೂಚನೆ ಕೊಡಬೇಕೆಂದು ಹೇಳುತ್ತಿದ್ದಾರೆ.

12.30 ಪಿ.ಎಂ

ಶ್ರೀ ಬಿ. ಸೋಮಶೇಖರ್ : ನಾನು ಜಿಲ್ಲಾಧಿಕಾರಿಗಳೊಡನೆ ಮಾತನಾಡಿ ಏನು ತೊಂದರೆಯಾಗಿದೆ ಅದನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.